**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 1970/2022**

ಪಿಡಬ್ಲೂ - 1

**ಪ್ರಮಾಣ ವಚನ ಮಾಡಿದ ದಿನಾಂಕ ಃ 10.02.2025.**

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಸಿ ಪಿ ವಕೀಲರಿಂದಃ

ನಾನು ದಿನಾಂಕ **27.09.2022** ರಂದು **04.15** ರ ಸುಮಾರಿಗೆ ಬೆಳವಡಿಯಲ್ಲಿಯೇ ಇದ್ದೇವು. ಬೆಳವಡಿಯಲ್ಲಿ ಯಾವ ಸ್ಥಳದಲ್ಲಿ ನಾನು ಹಾಜರಿದ್ದೇ ಎಂದರೆ ಸಾಕ್ಷಿ ಬೆಳವಡಿ ಗ್ರಾಮದಿಂದ ಬೈಲಹೊಂಗಲಕ್ಕೆ ಬರುವ ಮುಖ್ಯ ರಸ್ತೆಯಲ್ಲಿದ್ದೇನು ಎನ್ನುತ್ತಾರೆ. ನೀವು ಬೆಳವಡಿಯ ಮುಖ್ಯ ರಸ್ತೆಯ ಯಾವ ಜಾಗದಲ್ಲಿ ಇದ್ದೀರಿ ಎಂದರೆ ಸಾಕ್ಷಿ ನಾವು ಗಸ್ತು ಮಾಡುತ್ತಿದ್ದೇವು ನಿರ್ದಿಷ್ಟವಾಗಿ ಇಂತಹ ಸ್ಥಳ ಎಂದು ಹೇಳಲಾಗುವುದಿಲ್ಲ ಎನ್ನುತ್ತಾರೆ. ನನ್ನ ವಾಹನಕ್ಕೆ ದೂರವಾಣಿ ಸೌಕರ್ಯ ಇರುವುದಿಲ್ಲ. ದೂರವಾಣಿ ನಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದರೆ ಸರಿ. ಬೆಳವಡಿ ಬಸನಿಲ್ದಾಣ ಸರ್ಕಲ ಇರುತ್ತದೆ ನಾಲ್ಕು ಕಡೆಯಿಂದ ರಸ್ತೆ ಇರುತ್ತವೆ ಎಂದರೆ ಸರಿ. ಬೆಳವಡಿ ಸರ್ಕಲದಿಂದ ಸಿದ್ದಸಮುದ್ರಕ್ಕೆ ಹೋಗುವ ಕ್ರಾಸ ಬೆಳವಡಿ ಸರ್ಕಲದಿಂದ ಅರ್ಧ ಕೀ ಮೀಟರ ಇರುತ್ತದೆ ಎಂದರೆ ಸಾಕ್ಷಿ ಇಲ್ಲ **2** ಕೀ ಮೀಟರ ಇರುತ್ತದೆ ಎನ್ನುತ್ತಾರೆ. ಬುಡರಕಟ್ಟಿ ಗ್ರಾಮದಿಂದ ಬೆಳವಡಿಗೆ ಬರುವ ರಸ್ತೆಯಲ್ಲಿ ಸಿದ್ದಸಮುದ್ರಕ್ಕೆ ಹೋಗುವ ಕ್ರಾಸ ಇದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ನಿಶಾನೆ ಪಿ **3** ಮತ್ತು **4** ಪೋಟೋದಲ್ಲಿ ತೋರಿಸಿರುವ ಸ್ಥಳ ಬೆಳವಡಿ ಸರ್ಕಲದಿಂದ **5** ಕೀಲೋ ಮೀಟರ ದೂರದಲ್ಲಿರುತ್ತದೆ ಎಂದರೆ ಸಾಕ್ಷಿ **2** ಕೀ ಮೀ ಆಗುತ್ತದೆ ಎನ್ನುತ್ತಾರೆ. ನಿಶಾನೆ ಪಿ **3** ಮತ್ತು **4** ಪೋಟೋದಲ್ಲಿ ತೋರಿಸಿರುವ ರಸ್ತೆ ದಕ್ಷಿಣ ದಿಕ್ಕಿಗೆ ಇದ್ದು ಸದರಿ ರಸ್ತೆ ಬೆಳವಡಿ ಮತ್ತು ಬುಡರಕಟ್ಟಿಗೆ ಹೋಗುವ ಮುಖ್ಯ ರಸ್ತೆ ಎಂದರೆ ಸರಿ. ಸದರಿ ಪೋಟೋದಲ್ಲಿ ಕಾಣಿಸುತ್ತಿರುವ ಜಾಗೆಯ ದಕ್ಷಿಣ ದಿಕ್ಕಿಗೆ ಸಿದ್ದಸಮುದ್ರಕ್ಕೆ ಹೋಗುವ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಸಲಾದ ಗುನ್ಹೆ ಜಾಗ ಸೊಮೇಶ್ವರ ಸಕ್ಕರೆ ಕಾರ್ಖಾನೆಯ ಮುಖ್ಯ ದ್ವಾರ ಎಂದರೆ ಸರಿ. ಸೊಮೇಶ್ವರ ಸಕ್ಕರೆ ಕಾರ್ಖಾನೆಯ ಹದ್ದಿಯಲ್ಲಿ ಗಾಂಜಾ ಮಾರಾಟ ಮಾಡುವ ಬಗ್ಗೆ ನನಗೆ ಮಾಹಿತಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸೊಮೇಶ್ವರ ಸಕ್ಕರೆ ಕಾರ್ಖಾನೆಯ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ನನ್ನ ದೂರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**2.** ತಕ್ಕಡಿಯನ್ನು ಯಾರ ಅಂಗಡಿಯಿಂದ ತಂದಿದ್ದೀರಿ ಎಂದು ಹೇಳಲಾಗುವುದಾ ಎಂದರೆ ಸಾಕ್ಷಿಅವರ ಹೆಸರು ಹೇಳಲಾಗುವುದಿಲ್ಲ, ಬೆಳವಡಿ ಗ್ರಾಮದ ಕಿರಾಣಿ ಅಂಗಡಿಯಿಂದ ತಂದಿರುತ್ತೇವೆ. ತಕ್ಕಡಿ ನೀಡಿದವರ ಹೇಳಿಕೆ ಪಡೆದಿರುವುದಿಲ್ಲ. ಬೆಳವಡಿ ಗ್ರಾಮದ ಕಿರಾಣಿ ಅಂಗಡಿಯಿಂದ ತಕ್ಕಡಿ ತಂದ ಬಗ್ಗೆ ಪುರಾವೆ ಇರುವುದಿಲ್ಲ. ತಕ್ಕಡಿ ತರಲು ಹೇಳಿದಾಗ ಬೆಳವಡಿ ಬೈಲಹೊಂಗಲ ಮುಖ್ಯ ರಸ್ತೆಯಲ್ಲಿದ್ದೇವು. ತಕ್ಕಡಿ ತರಲು ಹೇಳಿದಾಗ ಸಮಯ **04.20** ಆಗಿತ್ತು. ತಕ್ಕಡಿಯನ್ನು **5** ನಿಮಿಷದಲ್ಲಿ ತಂದಿರುತ್ತಾರೆ. ದಿನಾಂಕ **27.09.2022** ರಂದು ನೀವು ಬೆಳವಡಿಯಲ್ಲಿ ಗಸ್ತು ಮಾಡುತ್ತಿದ್ದಾಗ ಗಾಂಜಾ ಮಾರಾಟ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದು

ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮಾಹಿತಿ ಬಂದ ನಂತರ ತನಿಖೆಯ ಭಾಗವಾಗಿ ಒಂದು ಕಿರಾಣಿ ಅಂಗಡಿಯಿಂದ ತಕ್ಕಡಿ ತರಿಸಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**3.** ಪಂಚರನ್ನು ಕರೆಯಲು ಹೇಳಿದಾಗ ಸಮಯ **04.25** ಆಗಿತ್ತು. ಸದರಿ ಸಮಯದಲ್ಲಿ ನಾನು ಬೆಳವಡಿ ಗ್ರಾಮದ ಮಲ್ಲಮ್ಮ ಸರ್ಕಲನಲ್ಲಿ ಇದ್ದೇವು. ಪಂಚರನ್ನು ಕರೆಯಲು ನಮ್ಮ ಸಿಬ್ಬಂದಿ ದ್ವಿಚಕ್ರ ವಾಹನದಲ್ಲಿ ಹೋಗಿದ್ದರು. ದ್ವಿಚಕ್ರದಲ್ಲಿ ಹೊದಂತಹ ಸಿಬ್ಬಂಧಿಯ ಚಾಸಾ **7** ರವರು. ಚಾಸಾ **7** ರವರು ತಮ್ಮ ದ್ವಿಚಕ್ರವಾಹವನ್ನು ತೆಗೆದುಕೊಂಡು ಬಗ್ಗೆ ನನ್ನ ದೂರಿನಲ್ಲಿ ಬರೆದಿರುವುದಿಲ್ಲ. ಚಾಸಾ **7** ರವರು ಗ್ರಾಮಪಂಚಾಯತಿ ಬೆಳವಡಿಯಿಂದ ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ಗ್ರಾಮಪಂಚಾಯತಿ ಬೆಳವಡಿ ಮಲ್ಲಮ್ಮನ ಸರ್ಕಲದಿಂದ **100** ಮೀಟರ ದೂರದಲ್ಲಿರುತ್ತದೆ. ಮೊದಲು ಚಾಸಾ **7** ರವರು ಬಂದರು ಸಾಕ್ಷಿದಾರರು ತಮ್ಮ ತಮ್ಮ ದ್ವಿಚಕ್ರ ವಾಹನದಲ್ಲಿ ಬಂದಿರುತ್ತಾರೆ. ನೋಟಿಸನ್ನು ಪಂಚರು ಬರುವ ಪೂರ್ವದಲ್ಲಿಯೇ ಬರೆದಿರುತ್ತೇವೆ. ಪಂಚರನ್ನು ಕರೆಸಿಕೊಂಡಿರುವುದು ಹಾಗೂ ನೋಟಿಸನ್ನು ಜಾರಿ ಮಾಡಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಂದಾಜು **3-4** ದೂರವಾಣಿ ಕರೆಗಳನ್ನು ಮಾಡಿರಬಹುದು. ಅದರ ಬಗ್ಗೆ ದೂರಿನಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಪತ್ರಾಂಕಿತ ಅಧಿಕಾರಿಗಳಿಗೆ ಮಾಡಿದ ದೂರವಾಣಿ ಕರೆಯನ್ನು ದೂರಿನಲ್ಲಿ ನಮೂದಿಸಿರುತ್ತೇನೆ. ಅವರನ್ನು ಹೊರತುಪಡಿಸಿ ಬೇರೆಯವರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರವಾಣಿ ಕರೆ ಮಾಡಿರುವುದಿಲ್ಲ. ಸದರಿ ದಿನದಂದು **3-4** ಜನ ಸಮವಸ್ತ್ರದಲ್ಲಿದ್ದೇವು. ಸಮವಸ್ತ್ರದಲ್ಲಿ ಇರದೇ ಇರುವ ಸಿಬ್ಬಂಧಿಗಳ ಹೆಸರು ನನಗೆ ನೆನಪಿರುವುದಿಲ್ಲ. **27.09.2022** ರಂದು ಮೇಲಾಧಿಕಾರಿಗಳಿಗೆ ಕರೆ ಮಾಡಿ ತಿಳಿಸಿರುತ್ತೀರಿ ಅವರು ಸಹ ನಿಮ್ಮೊಂದಿಗೆ ಬಂದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳು ಬಂದಾಗ ನಾವು ಬೆಳವಡಿ ಮಲ್ಲಮ್ಮನ ಸರ್ಕಲನಲ್ಲಿ ಇದ್ದೇವು.

ಬೇರೆ ಪ್ರಕರಣದಲ್ಲಿ ಜಪ್ತು ಮಾಡಿದ ಮುದ್ದೆ ಮಾಲನ್ನು ಆರೋಪಿ ಕಡೆಯಿಂದ ಜಪ್ತಿ ಮಾಡಿದ್ದೇವೆ ಎಂದು ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. **27.09.2022** ರಂದು ನಾನು ಬೆಳವಡಿ ಗ್ರಾಮದಲ್ಲಿ ಇರಲಿಲ್ಲ, ಹಾಗೂ ನಮಗೆ ಯಾವುದೇ ದೂರವಾಣಿ ಕರೆ ಬಂದಿರುವುದಿಲ್ಲ. ಅಂಕಿ ಅಂಶದ ಸಲುವಾಗಿ ಖೊಟ್ಟಿ ದೂರು ಸಲ್ಲಿಸಿ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಿದ್ದಸಮುದ್ರದ ಹದ್ದಿಯಲ್ಲಿ ಆರೋಪಿಯದು ಸ್ವಂತ ಜಮೀನು ಇರುತ್ತದೆ ಎಂದರೆ ಸಾಕ್ಷಿ ಪರಿಶೀಲನೆ ಮಾಡಿರುವುದಿಲ್ಲ ಎನ್ನುತ್ತಾರೆ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ನಾವು ಆರೋಪಿಸಿದಂತಹ ಗುನ್ನೆಯ ಜಾಗದಲ್ಲಿ ಪಂಚನಾಮೆ ಬರೆದಿರುತ್ತೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ